# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಲಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 281 | Pages. 2 | Date: 27-09-2025, SATURDAY | RNI NO: KARKAN/2024/89601 | Kannada Daily

ಸಂಪುಟ : 01 – ಸಂಚಿಕೆ : 281 – ಪುಟಗಳು : 2 27-09-2025 ಶನಿವಾರ | Ph: 8762954248 | ದರ : ₹1


# ಬೆಂಗಳೂರು-ಮೈಸೂರಿನಿಂದಲೂ ಟೂರ್ ಪ್ಯಾಕೇಜ್

## ಹಾಸನಾಂಬ ಜಾತ್ರೆಗೆ ಬರುವ ಭಕ್ತರಿಗೆ ಜಿಲ್ಲೆಯ ಪ್ರವಾಸಿ ತಾಣ ನೋಡುವ ಭಾಗ್ಯ : ಪ್ರವಾಸೋದ್ಯಮ ಇಲಾಖೆ ಚಿಂತನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವರ್ಷಕ್ಕೊಮ್ಮೆ ದರ್ಶನ ಭಾಗ್ಯ ಕರುಣಿಸುವ ಶಕ್ತಿ ದೇವತೆ ಹಾಸನಾಂಬ ಜಾತ್ರಾ ಮಹೋತ್ಸವ ವೇಳೆ ಜಿಲ್ಲೆಯ ಪ್ರವಾಸಿ ತಾಣಗಳನ್ನು ಪರಿಚಯಿಸುವ ಟೂರ್ ಪ್ಯಾಕೇಜ್ ಅನ್ನು ಈ ಬಾರಿ ವಿಸ್ತರಿಸಲಾಗಿದೆ.

ಪ್ರತಿವರ್ಷ ಹಾಸನದಿಂದಷ್ಟೇ ಪ್ರವಾಸಿ ಬಸ್‌ಗಳು ಸಂಚರಿಸುತ್ತಿದ್ದವು. ಆದರೆ ಈ ವರ್ಷ ಪ್ರವಾಸೋದ್ಯಮ ಇಲಾಖೆ ಬೆಂಗಳೂರು, ಮೈಸೂರಿನಿಂದಲೂ ವಿಶೇಷ ಬಸ್ ವ್ಯವಸ್ಥೆಗೆ ಯೋಜನೆ ಹಾಕಿಕೊಂಡಿದೆ. ಅ. 9 ರಿಂದ 23ರ ವರೆಗೆ ಪ್ರವಾಸಿ ಬಸ್‌ಗಳು ಸಂಚರಿಸಲಿವೆ.

ಬೆಂಗಳೂರಿನಿಂದ ಬರುವ ಪ್ರವಾಸಿಗರಿಗೆ 1 ಸಾವಿರ ರೂ. ದರ್ಶನ ಟಿಕೆಟ್ ಅನ್ನು ಒಳಗೊಂಡಿದ್ದು ಒಬ್ಬರಿಗೆ 2500 ರೂ., ಮೈಸೂರಿನಿಂದ ಬರುವ ಸಾರ್ವಜನಿಕರಿಗೆ ದರ್ಶನ ಟಿಕೆಟ್‌ನೊಂದಿಗೆ 2200 ರೂ. ನಿಗದಿ ಮಾಡಲಾಗಿದೆ.

ಹಾಸನಾಂಬ ದರ್ಶನದ ಬಳಿಕ ಸಪ್ತಮಾತೃಕೆಯರ ದರ್ಶನಕ್ಕೂ ಕರೆದೊಯ್ಯಲಾಗುತ್ತದೆ. ಹಾಸನದ ದೇವಿಗೆರೆ ಕಲ್ಯಾಣಿ, ಆಲೂರು ತಾಲ್ಲೂಕಿನ ಕೆಂಚಮ್ಮನ ಹೊಸಕೋಟೆ, ಮೊಸಳೆ ಗ್ರಾಮದ ನಾಗೇಶ್ವರ ಮತ್ತು ಚನ್ನಕೇಶವ ದೇವಾಲಯ ದರ್ಶನ ಭಾಗ್ಯ ಕರುಣಿಸಲಾಗುತ್ತಿದೆ. ಬೆಳಿಗ್ಗೆ 6 ಗಂಟೆಗೆ ಬೆಂಗಳೂರು ಹಾಗೂ ಮೈಸೂರಿನಿಂದ ಹೊರಡುವ ವೋಲ್ವೊ ಬಸ್ ಬೆಳಿಗ್ಗೆ 10 ಗಂಟೆಗೆ ಹಾಸನಾಂಬ ದೇವಸ್ಥಾನಕ್ಕೆ ಬರಲಿವೆ. ದೇವಿ ದರ್ಶನ ಬಳಿಕ ಉಳಿದ ಪ್ರವಾಸಿ ಸ್ಥಳಗಳಿಗೆ ಕರೆದುಕೊಂಡು ಹೋಗಲಾಗುತ್ತದೆ. ಉಪಾಹಾರ ಹಾಗು ಊಟದ ಖರ್ಚು ಪ್ರಯಾಣಿಕರದ್ದೇ ಆಗಿರುತ್ತದೆ.

### ಸ್ಥಳೀಯ ಪ್ಯಾಕೇಜ್ ವಿಸ್ತರಣೆ

ಬೆಂಗಳೂರು, ಮೈಸೂರಿನಿಂದ ನಿಗದಿಪಡಿಸಿರುವ ಪ್ಯಾಕೇಜ್ ಹೊರತುಪಡಿಸಿ ಸ್ಥಳೀಯವಾಗಿ ಏಳು ಮಾರ್ಗದಲ್ಲಿ ಪ್ರವಾಸ ಕೈಗೊಳ್ಳಲಾಗಿದೆ. ಪ್ರತಿದಿನ ಬೆಳಿಗ್ಗೆ 7 ಗಂಟೆಗೆ ನಗರ ಬಸ್ ನಿಲ್ದಾಣದಿಂದ ಹೊರಡುವ ಬಸ್‌ಗಳು ಪ್ರೇಕ್ಷಣೀಯ ಸ್ಥಳಗಳು ಹಾಗೂ ದೇವಸ್ಥಾನಗಳಿಗೆ ಭೇಟಿ ನೀಡಿ ಸಂಜೆ 5 ಗಂಟೆಗೆ ನಗರ ಬಸ್ ನಿಲ್ದಾಣಕ್ಕೆ ಬರಲಿವೆ. ಪ್ರವಾಸಿಗರಿಗೆ ಸ್ಥಳ ಮಾಹಿತಿ ನೀಡಲು ಮಾರ್ಗದರ್ಶಿಗಳು ಹಾಗೂ ಸಹಾಯಕರಾಗಿ ಆಶಾ ಕಾರ್ಯಕರ್ತರನ್ನು ನಿಯೋಜನೆ ಮಾಡಲಾಗುತ್ತಿದೆ.

ಪ್ಯಾಕೇಜ್ 1ರ ವಿವರ: ಹಾಸನದಿಂದ ವಾಟೆಹೊಳೆ ಜಲಾಶಯ, ಆಲೂರು ತಾಲ್ಲೂಕು ಪಾಳ್ಯ ಗ್ರಾಮದಲ್ಲಿರುವ ಜನಾರ್ದನ ದೇವಾಲಯ, ಅಬ್ಬಿ ಜಲಪಾತ, ಬೆಟ್ಟದ ಭೈರವೇಶ್ವರ ದೇವಸ್ಥಾನ ಒಟ್ಟು 182 ಕಿ.ಮೀ. ದೂರದ ಪ್ರಯಾಣ






> ಪ್ರತಿ ವರ್ಷದಂತೆ ಈ ವರ್ಷವೂ ಟೂರ್ ಪ್ಯಾಕೇಜ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಮೈಸೂರು, ಬೆಂಗಳೂರಿನಿಂದಲೂ ಪ್ರವಾಸೋದ್ಯಮ ಇಲಾಖೆಯಿಂದ ಬಸ್‌ಗಳ ವ್ಯವಸ್ಥೆ ಆಗಿದ್ದು, ಕೆಎಸ್‌ಆರ್‌ಟಿಸಿ ಅಧಿಕಾರಿಗಳು ದರ ಪಟ್ಟಿಯನ್ನು ತಾತ್ಕಾಲಿಕವಾಗಿ ನೀಡಿದ್ದಾರೆ.
>
> – ಅರುಣ್ ಕುಮಾರ್ ಸಂಗಾವಿ,
> ಪ್ರವಾಸೋದ್ಯಮ ಇಲಾಖೆ ಪ್ರಭಾರ ಉಪನಿರ್ದೇಶಕ

ಇದಾಗಿದೆ. ಪ್ರಯಾಣ ದರ ವಯಸ್ಕರಿಗೆ 500 ರೂ. ಮತ್ತು ಮಕ್ಕಳಿಗೆ 400 ರೂ. ಎಂದು ನಿಗದಿಪಡಿಸಲಾಗಿದೆ.

ಪ್ಯಾಕೇಜ್ 2: ಬೆಳಿಗ್ಗೆ 7.30ಕ್ಕೆ ಹಾಸನದಿಂದ ಸಕಲೇಶಪುರ ತಾಲ್ಲೂಕಿನ ಮುಂಜರಾಬಾದ್ ಕೋಟೆ, ಮೂಕನಮನೆ ಜಲಪಾತ, ಬಿಸ್ಲೆ ಘಾಟ್ ಒಟ್ಟು 192 ಕಿ.ಮೀ. ಪ್ರಯಾಣ ಇದಾಗಿದ್ದು, ವಯಸ್ಕರಿಗೆ 525 ರೂ. ಹಾಗು ಮಕ್ಕಳಿಗೆ 425 ರೂ. ಶುಲ್ಕ ಗೊತ್ತುಪಡಿಸಲಾಗಿದೆ.

ಪ್ಯಾಕೇಜ್ 3: ಹಾಸನದಿಂದ ಬೆಳಿಗ್ಗೆ 7 ಗಂಟೆಗೆ ಬೇಲೂರು ಚನ್ನಕೇಶವ ದೇವಾಲಯ ಭೇಟಿ, ಯಗಚಿ ಜಲಸಾಹಸ ಕೇಂದ್ರ, ಹಳೇಬೀಡಿನ ಪುಷ್ಪಗಿರಿ ಬೆಟ್ಟ, ಹೊಯ್ಸಳೇಶ್ವರ ದೇವಾಲಯ, ಕೊಂಡಜ್ಜಿಯ ವರದರಾಜಸ್ವಾಮಿ ದೇವಾಲಯ, ಸೀಗೆಗುಡ್ಡದ ಮಳೆಮಲ್ಲೇಶ್ವರ ದೇಗುಲ ವೀಕ್ಷಣೆ, ಒಟ್ಟು 116 ಕಿ.ಮೀ. ಪ್ರಯಾಣ ಇದಾಗಿದೆ. ವಯಸ್ಕರಿಗೆ 375 ರೂ. ಮತ್ತು ಮಕ್ಕಳಿಗೆ 275 ರೂ. ಟಿಕೆಟ್ ದರ ಇರಲಿದೆ.

ಪ್ಯಾಕೇಜ್ 4: ನುಗ್ಗೇಹಳ್ಳಿ ಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯ, ಶ್ರವಣಬೆಳಗೊಳ ವಿಂಧ್ಯಗಿರಿ ಹಾಗು ಚಂದ್ರಗಿರಿ ಬೆಟ್ಟ, ಬೆಲಸಿಂದ ಉದ್ಯಾನವನದ ಒಟ್ಟು ಪ್ರಯಾಣ 131 ಕಿ.ಮೀ. ಆಗಲಿದ್ದು ವಯಸ್ಕರಿಗೆ 400 ರೂ., ಮಕ್ಕಳಿಗೆ 300 ರೂ. ಪಾವತಿಸಬೇಕು.

ಪ್ಯಾಕೇಜ್ 5: ಕೋರವಂಗಲದ ಬೂಚೇಶ್ವರ ದೇಗುಲ, ಹಾರನಹಳ್ಳಿ ಗ್ರಾಮದ ಕೇಶವ ಹಾಗು ಸೋಮವೇಶ್ವರ ದೇವಸ್ಥಾನ, ಮಾಲೇಕಲ್ ತಿರುಪತಿ, ಜೇನುಕಲ್ ಸಿದ್ದೇಶ್ವರ ಬೆಟ್ಟ, ಗಾಂಧೀಜಿ ಚಿತಾ ಭಸ್ಮ, ಶಾಂತಿಗ್ರಾಮದ ನರಸಿಂಹಸ್ವಾಮಿ ದೇವಾಲಯ, ಹಾಸನದ ಗೆಂಟೆಕಟ್ಟೆ ಉದ್ಯಾನವನ ಬಳಿಕ ಹಾಸನಕ್ಕೆ ತಲುಪುವುದು. ಟಿಕೆಟ್ ದರ 400 ಹಾಗು 300 ರೂ. ಇರಲಿದೆ.

ಪ್ಯಾಕೇಜ್ 6: ಹಾಲುವಾಗಿಲು ಕಟ್ಟೆ, ಶೆಟ್ಟಿಹಳ್ಳಿ ಚರ್ಚ್, ಕೋನಾಪುರದ ರಂಗನಾಥಸ್ವಾಮಿ ದೇವಾಲಯ, ಕೊಣನೂರು ತೂಗುಸೇತುವೆ, ರಾಮನಾಥಪುರದ ಸುಬ್ರಹ್ಮಣ್ಯ ಮತ್ತು ರಾಮೇಶ್ವರ ದೇಗುಲ, ಗೊರೂರು ಹೇಮಾವತಿ ಜಲಾಶಯಕ್ಕೆ ಭೇಟಿ ನೀಡುವುದು. ಒಟ್ಟು 138 ಕಿ.ಮೀ. ಪ್ರಯಾಣ ಇದಾಗಿದೆ.

ಪ್ಯಾಕೇಜ್ 7: ಜಾವಗಲ್‌ನ ಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯ, ಅರಕೆರೆ ಚನ್ನಕೇಶವ ದೇವಸ್ಥಾನ, ಬೆಟ್ಟದಪುರ ರಂಗನಾಥಸ್ವಾಮಿ ದೇವಸ್ಥಾನ ಹಾಗೂ ಬಾಣಾವರ ಕೋಟೆ, ಹಾಸನದ ವಸ್ತು ಸಂಗ್ರಹಾಲಯ ವೀಕ್ಷಣೆಗೆ ಅವಕಾಶ ಕಲ್ಪಿಸಿದೆ. ವಯಸ್ಕರಿಗೆ 400 ರೂ. ಮತ್ತು ಮಕ್ಕಳಿಗೆ 300 ರೂ. ದರ ನಿಗದಿಪಡಿಸಲಾಗಿದೆ.

# ನಗರಾಭಿವೃದ್ಧಿ ಪ್ರಾಧಿಕಾರ ಸದಸ್ಯರಾಗಿ ಮುಕೇಶ್ ಶೆಟ್ಟಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ: ಸಕಲೇಶಪುರ ನಗರಾಭಿವೃದ್ಧಿ ಪ್ರಾಧಿಕಾರದ ಮೊದಲ ಸದಸ್ಯರಾಗಿ ಪುರಸಭಾ ಸದಸ್ಯ ಮುಕೇಶ್ ಶೆಟ್ಟಿ ಅವರನ್ನು ಬಹುಮತದಿಂದ ಆಯ್ಕೆ ಮಾಡಲಾಯಿತು.

ಪುರಸಭಾ ಅಧ್ಯಕ್ಷೆ ಜ್ಯೋತಿ ರಾಜಕುಮಾರ್ ಮಾತನಾಡಿ, ಸಕಲೇಶಪುರದ ನಗರಾಭಿವೃದ್ಧಿಗೆ ಆಯ್ಕೆಯಾಗಿರುವ ಮುಕೇಶ್ ಶೆಟ್ಟರು ತಮ್ಮ ಅವಧಿಯಲ್ಲಿ ಪುರಸಭೆಯನ್ನು ಇನ್ನ?ಟ್ಟು ಅಭಿವೃದ್ಧಿಪಡಿಸಿ ನಗರಾಭಿವೃದ್ಧಿಯಲ್ಲಿ ಜನ ಮೆಚ್ಚುವಂತ ಕೆಲಸ ಮಾಡಲಿ ಎಂದು ಆಶಿಸಿದರು.

ಮುಕೇಶ್ ಶೆಟ್ಟಿ ಮಾತನಾಡಿ, ನಗರಾಭಿವೃದ್ಧಿ ಪ್ರಾಧಿಕಾರದ ಮೊದಲ ಸದಸ್ಯನಾಗಿ ಆಯ್ಕೆ ಮಾಡಿರುವ ಪುರಸಭಾ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಎಲ್ಲಾ ಸದಸ್ಯರಿಗೆ ಧನ್ಯವಾದ ಅರ್ಪಿಸುತ್ತೇನೆ. ಸಕಲೇಶಪುರವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಮತ್ತು ಪುರಸಭೆಯನ್ನು ರಾಜ್ಯಕ್ಕೆ ಮಾದರಿಯನ್ನಾಗಿಸುವ ದಿಶೆಯಲ್ಲಿ ಕಾರ್ಯನಿರ್ವಹಿಸುತ್ತೇನೆ ಎಂದು ತಿಳಿಸಿದರು.

ಪುರಸಭಾ ಉಪಾಧ್ಯಕ್ಷೆ ಝರಿನಾ, ಪುರಸಭಾ ಮಾಜಿ ಅಧ್ಯಕ್ಷರಾದ ಯಾದ್ಗಾರ್, ಇಬ್ರಾಹಿಂ, ಆದರ್ಶ್, ಕಾಡಪ್ಪ, ಎಲ್ಲಾ ಸದಸ್ಯರು ಹಾಗೂ ಮುಖ್ಯಾಧಿಕಾರಿ ಮಹೇಶ್ವರಪ್ಪ ಉಪಸ್ಥಿತರಿದ್ದರು.

## ಮೃತ ಅಪರಿಚಿತ ವ್ಯಕ್ತಿಯ ಪತ್ತೆಗೆ ಸಹಕರಿಸಿ

ಹಾಸನ : ಮಾವಿನಕೆರೆ ಹಾಸನ ರೈಲು ನಿಲ್ದಾಣಗಳ ಮಧ್ಯೆ ರೈಲಿಗೆ ಸಿಕ್ಕಿ ಅಪರಿಚಿತ ವ್ಯಕ್ತಿ ಮೃತಪಟ್ಟಿದ್ದಾರೆ. ಅರಸೀಕೆರೆ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಚಹರೆ:- ವಯಸ್ಸು 60-65 ವರ್ಷ, 5.2 ಅಡಿ ಎತ್ತರ, ಕಪ್ಪು ಮೈ ಬಣ್ಣ, ತೆಳುವಾದ ಶರೀರ, ಉದ್ದ ಮೂಗು, ಕೋಲು ಮುಖ, ಮುಂದಲೆಯಲ್ಲಿ ಕೂದಲು ಇರುವುದಿಲ್ಲ, ಹಿಂದಲೆಯಲ್ಲಿ 2 ಇಂಚು ಬಿಳಿ ಕೂದಲು, 5 ಇಂಚಿನಷ್ಟು ಬಿಳಿ ಗಡ್ಡ ಬಿಟ್ಟಿರುತ್ತಾರೆ.

# ಜೋಯಾಲುಕ್ಕಾಸ್ ನವೀಕೃತ ಮಳಿಗೆ ಉದ್ಘಾಟನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ನಗರದ ಬಿ.ಎಂ ರಸ್ತೆಯಲ್ಲಿರುವ ಜೋಯಾಲುಕ್ಕಾಸ್ ನವೀಕೃತ ಮಳಿಗೆಯನ್ನು ಸಂಸದ ಶ್ರೇಯಸ್ ಪಟೇಲ್ ಇಂದು ಉದ್ಘಾಟಿಸಿದರು.

ನವೀಕೃತ ಮಳಿಗೆ ಉದ್ಘಾಟನೆ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಮೇಯರ್ ಗಿರೀಶ್ ಚನ್ನವೀರಪ್ಪ, ಉಪಮೇಯರ್ ಹೇಮಲತಾ ಕಮಲ್ ಕುಮಾರ್, ಜಾಯಲುಕ್ಕಾಸ್ ನ

ಕರ್ನಾಟಕದ ಪ್ರಾದೇಶಿಕ ವ್ಯವಸ್ಥಾಪಕ ಜಿನೇಶ್ ವಿಎಸ್, ಚಿಲ್ಲರೆ ವ್ಯಾಪಾರದ ಮುಖ್ಯಸ್ಥ ರಾಜೇಶ್ ಕೃಷ್ಣನ್ ಇತರರು ಸಂಸದರಿಗೆ ಕೈ ಜೋಡಿಸಿದರು.

ಬಳಿಕ ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಜಾಯಾಲುಕ್ಕಾಸ್ ದೇಶದಲ್ಲಿ ನಂಬಿಕಸ್ತ ಹಾಗೂ ಗುಣಮಟ್ಟದ ಆಭರಣಗಳನ್ನು ಒದಗಿಸುವ ಮೂಲಕ ಹೆಸರುವಾಸಿಯಾಗಿದೆ. ಹಾಸನದ ಜನರು ತಮ್ಮ ನೆಚ್ಚಿನ ಆಭರಣಗಳನ್ನು ಇಲ್ಲಿ ಖರೀದಿಸುವಂತೆ ಕರೆ ನೀಡಿದರು.

ಜೋಯಾಲುಕ್ಕಾಸ್ ಹಾಸನದಲ್ಲಿಯೂ ಕಳೆದ ಹಲವು ವರ್ಷಗಳಿಂದ ರಿಯಾಯಿತಿ ದರದಲ್ಲಿ ಚಿನ್ನ, ಬೆಳ್ಳಿ, ವಜ್ರದ ಆಭರಣಗಳನ್ನು ಗ್ರಾಹಕರಿಗೆ ಒದಗಿಸುವ ಮೂಲಕ ಗ್ರಾಹಕರ ನಂಬಿಕೆಯನ್ನು ಗಳಿಸಿದೆ, ಅಲ್ಲದೆ ಕಂತುಗಳ ಮೂಲಕ ಹಣ ಪಾವತಿಸಿ ಆ ಮೂಲಕವೂ ಒಡವೆಗಳನ್ನು ಖರೀದಿಸಲು ಅವಕಾಶ ಕಲ್ಪಿಸಿರುವ ಜಾಯಾಲುಕ್ಕಾಸ್ ಮಳಿಗೆಗಳು ಇನ್ನಷ್ಟು ಹೆಚ್ಚಾಗಲಿ ಎಂದು ಶುಭ ಹಾರೈಸಿದರು.

ಜಾಯಲುಕ್ಕಾಸ್ ನ ಕರ್ನಾಟಕದ ಪ್ರಾದೇಶಿಕ ವ್ಯವಸ್ಥಾಪಕ ಜಿನೇಶ್ ವಿಎಸ್, ಮಾತನಾಡಿ, ಕಳೆದ ಹತ್ತು ವರ್ಷಗಳಿಂದ ಹಾಸನದಲ್ಲಿ ಸೇವೆ ಸಲ್ಲಿಸುತ್ತಿರುವ ಜಾಯಾಲುಕ್ಕಾಸ್ ಇದೀಗ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ ಆದುದರಿಂದ ಎರಡು ಹಂತದ ಕಟ್ಟಡದ ಜೊತೆಗೆ ನವೀಕರಣಗೊಳಿಸಲಾಗಿದೆ. ಇನ್ನು ಮುಂದಿನ ವರ್ಷಗಳಲ್ಲಿ 200 ಮಳಿಗೆಗಳನ್ನು ದೇಶಾದ್ಯಂತ ತೆರೆಯುವ ಗುರಿ ಹೊಂದಲಾಗಿದೆ ಎಂದರು.

ದೇಶದಲ್ಲಿ 170ಕ್ಕೂ ಅಧಿಕ ಮಳಿಗೆಗಳನ್ನು ಹೊಂದಿರುವ ನಮ್ಮ ಸಂಸ್ಥೆ ಹಾಸನದಲ್ಲಿ ದೊಡ್ಡ ಮಳಿಗೆಯನ್ನು ಹೊಂದುವ ಜೊತೆಗೆ ಗ್ರಾಹಕರಿಗೆ ಗುಣಮಟ್ಟದ ಆಭರಣಗಳನ್ನು ರಿಯಾಯಿತಿ ದರದಲ್ಲಿ ವಿಶೇಷ ಆಫರ್ ಗಳೊಂದಿಗೆ ನೀಡುತ್ತಿದೆ ಅಲ್ಲದೆ ಉತ್ತಮ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು ಇದೀಗ ಮೇಕಿಂಗ್ ಚಾರ್ಜಸ್ ನಲ್ಲಿ ಶೇಕಡ 50ರಷ್ಟು ರಿಯಾಯಿತಿ ಒದಗಿಸಲಾಗಿದೆ ಎಂದರು.

# ಹಾಸನ-ಬೇಲೂರು ರಸ್ತೆಯಲ್ಲಿ ಸರಣಿ ಅಪಘಾತ ಪ್ರಯಾಣಿಕರಿಗೆ ಗಂಭೀರ ಗಾಯ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ : ಟಿಪ್ಪರ್, ಕಾರು ಹಾಗೂ ಆಟೋ ನಡುವೆ ಮುಖಾಮುಖಿ ಸರಣಿ ಅಪಘಾತ ಸಂಭವಿಸಿದ್ದು ಪ್ರಯಾಣಿಕರು ಗಂಭೀರವಾಗಿ ಗಾಯಗೊಂಡು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಹಳೇಬೀಡು ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ನೆಡೆದಿದೆ..

ಹಾಸನ ಬೇಲೂರು ರಸ್ತೆ ಹಗರೆ ಬಳಿಯ ಮಲ್ಲಿಕಾರ್ಜುನಪುರ ಗ್ರಾಮದ ಸಮೀಪ ಶುಕ್ರವಾರ ಸಂಜೆ ಬೀಕರ ಅಪಘಾತ ನೆಡೆದಿದೆ. ಬೇಲೂರಿನ ಕಡೆಯಿಂದ ಬರುತ್ತಿದ್ದ ಟಿಪ್ಪರ್ ಹಾಗೂ ಆಟೋಗೆ ಹಾಸನ ಕಡೆಯಿಂದ ಬರುತ್ತಿದ್ದ ಕಾರು ಡಿಕ್ಕಿಯಾಗಿದೆ. ಕಾರಿನಲ್ಲಿದ್ದ ಚಾಲಕನಿಗೆ ಹಾಗೂ ಆಟೋದ ಚಾಲಕ ಮತ್ತು ಮಹಿಳೆಗೆ ಗಂಬೀರ ಗಾಯಗಳಾಗಿದ್ದು ಅದೃಷ್ಟವಶಾತ್ ಪ್ರಣಾಪಾಯದಿಂದ ಪಾರಾಗಿದ್ದಾರೆ ಗಾಯಾಳುಗಳನ್ನು ಚಿಕಿತ್ಸೆ ಗೆ ಅಂಬುಲೆನ್ಸ್ ನಲ್ಲಿ ಹಾಸನದ ಹಿಮ್ಸ್ ಆಸ್ಪತ್ರೆಗೆ ರವಾನಿಸಲಾಯಿತು. ಕಾರಿನ ಚಾಲಕ ಮೂಡಿಗೆರೆಯವರು ಹಾಗೂ ಆಟೋದಲ್ಲಿದ್ದವರು ಹಾಸನದವರು ಎಂದು ತಿಳಿದು ಬಂದಿದೆ.

ಅಧಿಕ ಬಾರ ತುಂಬಿದ್ದ ಟಿಪ್ಪರ್ ಲಾರಿಗೆ ಕಾರು ಡಿಕ್ಕಿಯಾಗಿದ್ದು ಡಿಕ್ಕಿ ರಬಸಕ್ಕೆ ಕಾರಿನ ಇಂಜಿನ್ ಕಳಚಿದೆ. ಲಾರಿಯ ಆಕ್ಸೆಲ್ ರಾಡ್ ತುಂಡಾಗಿ ಮುಂದಿನ ಚಕ್ರ ಬೇರ್ಪಟ್ಟು ನಡು ರಸ್ತೆಯಲ್ಲಿ ನಿಂತಿತು. ಟಿಪ್ಪರ್ ಗೆ ಡಿಕ್ಕಿ ಹೊಡೆದ ಕಾರು ಮುಂದೆ ಸಾಗಿ ಆಟೊಗೆ ಗುದ್ದಿದ್ದು ಎರಡು ಅಪ್ಪಚ್ಚಿಯಾಗಿದೆ.

ಆಟೊದಲ್ಲಿ ಸಿಲುಕಿಕೊಂಡಿದ್ದ ಚಾಲಕ ಹಾಗೂ ಮಹಿಳೆಯನ್ನು ಸ್ಥಳೀಯರು ಆಟೋದ ಕಬ್ಬಿಣಗಳನ್ನು ಮೀಟಿ ತೆಗೆದು ಪ್ರಾಣ ಉಳಿಸಿದ್ದಾರೆ. ಕಾರಿನ ಏರ್ ಬಲೂನ್ ತೆರೆದಿದ್ದರಿಂದ ಚಾಲಕ ಪ್ರಾಣ ರಕ್ಷಿಸಿಕೊಂಡಿದ್ದು ಕೈ ಕಾಲುಗಳಿಗೆ ಪೆಟ್ಟಾಗಿದೆ .

ಟಿಪ್ಪರ್ ಚಾಲಕ ಲಾರಿಬಿಟ್ಟು ಓಡಿಹೋಗಿದ್ದು ಹಳೇಬೀಡು ಪೋಲೀಸ್




ಠಾಣೆಯಲ್ಲಿ ಕೇಸು ದಾಖಲಾಗದೆ.

ಅಪಘಾತದಿಂದ ಅರ್ದ ಘಂಟೆಗೂ ಹೆಚ್ಚು ಕಾಲ ರಸ್ತೆಯಲ್ಲಿ ವಾಹನಗಳು ನಿಲ್ಲಬೇಕಾಯಿತು, ನಂತರ ಸ್ಥಳಕ್ಕೆ ಬಂದ ಹಗರೆ ಪೋಲೀಸ್ ಠಾಣಾಧಿಕಾರಿಗಳು ಅಪಘಾತವಾಗಿದ್ದ ವಾಹನಗಳನ್ನು ಪಕ್ಕಕ್ಕೆ ಸರಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

# ನಿರಂತರ ಮಳೆಗೆ ಸಿಲುಕಿ ಬೆಳೆ ಹಾನಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಬೇಲೂರು : ಪ್ರದೇಶಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರರವರ ಆದೇಶದಂತೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಬಿಜೆಪಿ ರಾಜ್ಯ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಡಾ.ನವೀನ್ ಹೇಳಿದರು.

ತಾಲೂಕಿನ ಅರೇಹಳ್ಳಿ ಸಮೀಪದ ವಾಟೇಹಳ್ಳಿ ಗ್ರಾಮದ ಕಾಫಿ ಬೆಳೆಗಾರ ಹಾಗೂ ಎಚ್‌ಡಿಪಿಎ ಜಿಲ್ಲಾ ಉಪಾಧ್ಯಕ್ಷ ಮಂಜುನಾಥ್ ಶೆಟ್ಟಿಯವರ ಕಾಫಿ ತೋಟಕ್ಕೆ ಭೇಟಿ ನೀಡಿ ಪರಿಶೀಲಿಸಿ ಬೆಳೆಗಾರರ ಸಮಸ್ಯೆಂ ಆಲಿಸಿ ಮಾತನಾಡಿದ ಅವರು, ರಾಜ್ಯದ ಕೃಷಿ ಸಚಿವರು ಮಂಡ್ಯ, ಮೈಸೂರು ಜಿಲ್ಲೆಗೆ ಸೀಮಿತವಾಗಿದ್ದಾರೆ. ಜಿಲ್ಲಾ ಉಸ್ತುವಾರಿ ಮಂತ್ರಿ ಹಾಗೂ ಅಧಿಕಾರಿಗಳು ಕೈಕಟ್ಟಿ ಕುಳಿತಿರುವುದು ಶೋಚನೀಯ ಸಂಗತಿಯಾಗಿದೆ. ಕಾಂಗ್ರೆಸ್ ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿರುವುದು ಅತ್ಯಂತ ಖಂಡನೀಯ. 2019ರಲ್ಲಿ ಬಿಜೆಪಿ ಸರಕಾರವಿದ್ದ ಸಂದರ್ಭ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪರವರು ಎನ್ ಡಿಆರ್‌ಎಫ್ ನಿಯಮದ ಜತೆಗೆ ವಾರ್ಷಿಕ ಬೆಳೆಗೆ ಹೆಕ್ಟೇರ್‌ಗೆ 28,000 ರೂ, ಪರಿಹಾರ ಘೋಷಿಸಿದ್ದರು. ಮತ್ತು ರಾಜ್ಯ ಸರ್ಕಾರ ರೈತರ ಬೆಳೆ ಸಾಲ ಮನ್ನಾ, ರೈತ ವಿದ್ಯಾನಿಧಿ ಜಾರಿ, ಹೆಕ್ಟೇರ್‌ಗೆ 50,000 ರೂ, ಪರಿಹಾರ ಸೇರಿದಂತೆ ರೈತರ ಪರವಾಗಿ ಸರ್ಕಾರ ಕೆಲಸ ಮಾಡಬೇಕು ಎಂದು ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದರು.


ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಮಾತನಾಡಿ, ಈ ಸರ್ಕಾರದಲ್ಲಿ ರೈತರು ಬೆಳೆ ವಿಮೆ ಮಾಡಿಸಿದರೂ ಬೆಳೆ ಪರಿಹಾರ ದೊರಕುತ್ತಿಲ್ಲ. ಮಂತ್ರಿಗಳು ಹಾಗೂ ಅಧಿಕಾರಿಗಳು ಖುದ್ದು ಸ್ಥಳ ಪರಿಶೀಲನೆ ನಡೆಸಬೇಕು. ಆನೆ ಕಾರಿಡಾರ್ ಯೋಜನೆ ಸಂಪೂರ್ಣವಾಗಿ ನನೆಗುದಿಗೆ ಬಿದ್ದಿದೆ. ಆನೆಗಳಿಂದ ಸಾವು ನೋವು ಸಂಭವಿಸಿದರೆ ಮಾತ್ರ ಮಂತ್ರಿಗಳು ಸ್ಥಳಕ್ಕಾಗಮಿಸಿ ಇಂತಿಷ್ಟು ಪರಿಹಾರ ನೀಡಿ ಕಣ್ಣೊರೆಸುವ ತಂತ್ರ ಅನುಸರಿಸುತ್ತಿದ್ದಾರೆ ವಿನಃ ಆನೆ-ಮಾನವ ಸಂಘರ್ಷವು ತಾರ್ಕಿಕ ಅಂತ್ಯ ಕಂಡಿಲ್ಲ ಎಂದರು.

ಎಚ್‌ಡಿಪಿಎ ಜಿಲ್ಲಾ ಉಪಾಧ್ಯಕ್ಷ ಮಂಜುನಾಥ್ ಶೆಟ್ಟಿ ಮಾತನಾಡಿ, ಮಳೆಗೆ ಕಾಫಿ ಬೆಳೆ ಭಾಗಶಃ ಹಾನಿಯಾಗಿದೆ. ಶೇ.90 ರಷ್ಟು ಬೆಳೆ ಹಾನಿ ಸಂಭವಿಸಿದ್ದು ಸೂಕ್ತ ಪರಿಹಾರ ನೀಡಿಲ್ಲ. ಬಿಟ್ಟಿ ಭಾಗ್ಯ ನೀಡುತ್ತಿರುವುದೇ ಸರಕಾರದ ಸಾಧನೆಯಾಗಿದೆ ಎಂದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಮಿತ್‌ಶೆಟ್ಟಿ, ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾರಾಯಣಗೌಡ, ರೈತ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಚಂದ್ರಶೇಖರ್ ಶೆಟ್ಟಿ, ಮುಖಂಡರಾದ ಬಸವರಾಜು, ಮಹೇಶ್‌ಶೆಟ್ಟಿ, ಅಶೋಕ್ ಸೇರಿದಂತೆ ಇತರರಿದ್ದರು.

# ಪಂಚ ಭೂತಗಳಲ್ಲಿ ಲೀನರಾದ ಎಸ್.ಎಲ್. ಭೈರಪ್ಪ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಮೈಸೂರು: ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ, ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಸಂತೇಶಿವರದ ಸಾಹಿತಿ ಡಾ. ಎಸ್. ಎಲ್. ಭೈರಪ್ಪ ಅವರ ಅಂತ್ಯಕ್ರಿಯೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಬ್ರಾಹ್ಮಣ ಹೊಯ್ಸಳ ಕರ್ನಾಟಕ ಸಂಪ್ರದಾಯದಂತೆ ಸರ್ಕಾರದ ಸಕಲ ಗೌರವದೊಂದಿಗೆ ಶುಕ್ರವಾರ ನೆರವೇರಿತು.

ರಾಜಕೀಯ ನಾಯಕರು, ಎಸ್. ಎಲ್.ಭೈರಪ್ಪ ಅಭಿಮಾನಿಗಳು ಸೇರಿ ಸಾವಿರಾರು ಜನರು ಪಾಲ್ಗೊಂಡು ನೆಚ್ಚಿನ ಬರಹಗಾರನಿಗೆ ಅಂತಿಮ ನಮನ ಸಲ್ಲಿಸಿದರು. ಅರಮನೆ ಪುರೋಹಿತರಾದ ಚಂದ್ರಶೇಖರ ಶಾಸ್ತ್ರಿ ನೇತೃತ್ವದ ಏಳು ಜನ ಪುರೋಹಿತರ ತಂಡವು ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿತು.

ಮಧ್ಯಾಹ್ನ 12 ಗಂಟೆ ಸುಮಾರಿನಲ್ಲಿ ಭೈರಪ್ಪ ಅವರ ಮಕ್ಕಳಾದ ರವಿಶಂಕರ್, ಉದಯ ಶಂಕರ್ ಹಾಗೂ ಸಾಹಿತಿ ಸಹನಾ ವಿಜಯ್‌ಕುಮಾರ್ ಮೃತರ ಪಾರ್ಥಿವ ಶರೀರಕ್ಕೆ ಅಗ್ನಿ ಸ್ಪರ್ಶ ಮಾಡಿದರು. ಈ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ, ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಕೂಡ ಕೈ ಜೋಡಿಸಿದರು.

ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಆಗುತ್ತಿದ್ದಂತೆ ಅಭಿಮಾನಿಗಳು ಅಅಮರ್ ರಹೇ ಭೈರಪ್ಪಾಜಿ, ಅಅಮರ್ ರಹೇ ಭೈರಪ್ಪಾಜಿ, ಅಮರ್ ರಹೇ ಎಂಬ ಘೋ?ಣೆ ಕೂಗಿದರು. ಆ ಮೂಲಕ ಜೀವನ ಯಾನ ಮುಗಿಸಿದ ಅಕ್ಷರ ಬ್ರಹ್ಮ ಎಸ್.ಎಲ್.ಭೈರಪ್ಪ ಪಂಚಭೂತಗಳಲ್ಲಿ ಲೀನವಾದರು.

ಅದಕ್ಕೂ ಮುನ್ನ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಸಚಿವ ಕೆ.ವೆಂಕಟೇಶ್, ಶಾಸಕ ಟಿ.ಎಸ್. ಶ್ರೀವತ್ಸ , ವಿಧಾನ ಪರಿ?ತ್ ಸದಸ್ಯ ಕೆ. ಶಿವಕುಮಾರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮತ್ತಿತರರು ಪಾರ್ಥಿವ ಶರೀರಕ್ಕೆ ಪು?ಗುಚ್ಛ ಸಮರ್ಪಿಸಿ ಅಂತಿಮ ನಮನ ಸಲ್ಲಿಸಿದರು.

ನಂತರ 10 ಮಂದಿ ಪೊಲೀಸರು ಮೂರು ಸುತ್ತು ಗುಂಡು ಹಾರಿಸಿ ಗೌರವ ಸಲ್ಲಿಸಿದರು. ಜತೆಗೆ ಪೊಲೀಸ್ ಬ್ಯಾಂಡ್ ತಂಡ ರಾ?ಗೀತೆ ನುಡಿಸಿತು. ಈ ವೇಳೆ ಬಹುತೇಕರು ಭೈರಪ್ಪ ಅವರಿಗೆ ನಮಿಸಿ ಕಣ್ಣೀರಾದರು. ಮೃತದೇಹ ಒಯ್ಯುವಾಗ ಹೆಗಲು ಕೊಟ್ಟರು. ಮೃತದೇಹದ ಮೇಲೆ ಹೊದಿಸಿದ್ದ ರಾ?ಧ್ವಜವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಭೈರಪ್ಪ ಅವರ ಮಕ್ಕಳಾದ ರವಿಶಂಕರ್ ಹಾಗೂ ಉದಯಶಂಕರ್ ಗೆ ಹಸ್ತಾಂತರಿಸಿದರು.

ಕುಟುಂಬದವರು ಅಪರ ಕರ್ಮ ವಿಧಾನಗಳನ್ನು ನೆರವೇರಿಸಿ ಕಣ್ಣೀರು ಹಾಕುತ್ತಾ ವಿದಾಯ ಹೇಳಿದರು. ಮಾಜಿ ಶಾಸಕ ಎಲ್.ನಾಗೇಂದ್ರ, ತೇಜಸ್ವಿನಿ ಅನಂತಕುಮಾರ್ ಸೇರಿದಂತೆ ಅಪಾರ ಅಭಿಮಾನಿಗಳು ಇದ್ದರು.

# ಜಿಲ್ಲೆಯ ಶ್ರೇಷ್ಠ ಸಾಧಕರು ಭೈರಪ್ಪ-ಶಿವಣ್ಣ: ಸೋಮಶೇಖರ ಶ್ರೀ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಪ್ರಪಂಚದಲ್ಲಿ ಕೋಟ್ಯಂತರ ಜನರು ಹುಟ್ಟುತ್ತಾರೆ. ಕೋಟ್ಯಾಂತರ ಜನ ಸಾಯುತ್ತಾರೆ. ಆದರೆ, ಕೆಲವರು ತಮ್ಮ ಕಾರ್ಯಗಳ ಮೂಲಕ ಜನರ ಮನಸ್ಸಿನಲ್ಲಿ ಉಳಿಯುತ್ತಾರೆ. ಅಂತವರ ಸಾಲಿನಲ್ಲಿ ಎಸ್.ಎಲ್. ಭೈರಪ್ಪ ಹಾಗೂ ಎಚ್.ಎಂ.ಶಿವಣ್ಣ ನಿಲ್ಲುತ್ತಾರೆ ಎಂದು ಪುಷ್ಪಗಿರಿ ಮಠದ ಸೋಮಶೇಖರ ಸ್ವಾಮೀಜಿ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಜಿಲ್ಲಾ ನಾಗರಿಕ ಸಮಿತಿ ವತಿಯಿಂದ ಹಿರಿಯ ಸಾಹಿತಿ ಎಸ್.ಎಲ್.ಭೈರಪ್ಪ ಮತ್ತು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಂ.ಶಿವಣ್ಣ ಅವರಿಗೆ ಶುಕ್ರವಾರ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಸಾನ್ನಿಧ್ಯ ವಹಿಸಿ ಮಾತನಾಡಿದರು. ಜಿಲ್ಲೆಯ ಇಬ್ಬರು ಮಹಾನ್ ವ್ಯಕ್ತಿಗಳು ನಮ್ಮನ್ನ ಅಗಲಿರುವುದು ನೋವಿನ ಸಂಗತಿ. ಆದರೆ ಅವರ ಆದರ್ಶ ಮತ್ತು ಮಾರ್ಗದರ್ಶನ ಪ್ರತಿಯೊಬ್ಬರಿಗೂ ಕೂಡ ಪ್ರೇರಣೆಯಾಗಿದೆ ಎಂದು ಹೇಳಿದರು.

ಭೈರಪ್ಪನವರು ಒಂದು ಜಾತಿ, ಒಂದು ಧರ್ಮಕ್ಕೆ ಸೀಮಿತರಾದವರಲ್ಲ. ಆದರೆ, ಅವರನ್ನು ನಾವು ಆ ರೀತಿ ಕಾಣುವ ಮೂಲಕ ಸಣ್ಣತನವನ್ನ ತೋರ್ಪಡಿಕೆ ಮಾಡಿದ್ದೇವೆ. ಅಂತಹ ಮನಸ್ಥಿತಿಗಳು ನಮ್ಮಿಂದ ದೂರವಾಗಬೇಕು. ಅವರ ಆದರ್ಶ ಮತ್ತು ಅವರ ತತ್ವಗಳು ಮಕ್ಕಳಿಗೆ ಪ್ರೇರಣೆಯಾಗಬೇಕು. ಅವರ ಕಾದಂಬರಿಗಳಲ್ಲಿ ನಾವು ಜೀವನದ ಮೌಲ್ಯವನ್ನು ಮತ್ತು ಸಮಾಜದ ಕಟ್ಟುಪಾಡುಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ ಎಂದರು.

ವಿಶ್ವ ಒಕ್ಕಲಿಗ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, ಈ ಜಿಲ್ಲೆಯ ಇಬ್ಬರು ಗಣ್ಯರನ್ನು ಕಳೆದುಕೊಂಡಿದ್ದೇವೆ. ಆದರೆ, ಅವರ ತತ್ವ ಆದರ್ಶಗಳು ನಮಗೆ ಪ್ರೇರಣೆ.

ಮುಂದಿನ ದಿನಗಳಲ್ಲಿ ಇಬ್ಬರ ಹೆಸರಿನಲ್ಲಿ ದತ್ತಿನಿಧಿಯನ್ನ ಸ್ಥಾಪಿಸುವ ಮೂಲಕ ಆ ರೀತಿ ಕೆಲಸ ಮಾಡಿರುವವರನ್ನು ಸನ್ಮಾನಿಸುವ ಕೆಲಸಗಳು ನಡೆಯಲಿ ಎಂದು ಹೇಳಿದರು.

ಎಚ್.ಎಂ. ಶಿವಣ್ಣ ಅವರು ನನಗೆ 2016 ರಿಂದ ಚಿರಪರಿಚಿತರು ನಾನು ಇಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಗಾಂಧಿ ಭವನ ನಿರ್ಮಾಣವಾಗಬೇಕಾದರೆ ಅವರ ಪಾತ್ರ ಅತ್ಯಂತ ಪ್ರಮುಖವಾದುದು. ಒಂದು ಸರ್ಕಾರ ಮಾಡದೆ ಇದ್ದದ್ದನ್ನು ಒಬ್ಬ ವ್ಯಕ್ತಿ ಸರ್ಕಾರ ಮತ್ತು ಅಧಿಕಾರಿಗಳನ್ನು ಹಿಡಿದು ಕೆಲಸ ಮಾಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಎಸ್.ಎಲ್.ಭೈರಪ್ಪ ಅವರು ಕನ್ನಡ ಸಾಹಿತ್ಯ ಲೋಕಕ್ಕೆ ಅಲ್ಲದೆ ಇಡೀ ಭಾರತದ ಸಾಹಿತ್ಯ ಲೋಕಕ್ಕೆ ಹಲವಾರು ಕೃತಿ ಮತ್ತು ಕಾದಂಬರಿಗಳನ್ನು ನೀಡುವ ಮೂಲಕ ಅಪಾರ ಸೇವೆ ಸಲ್ಲಿಸಿದ್ದಾರೆ. ಅವರ ಚಿಂತನೆ ಬರಹಗಳು ಪ್ರಸ್ತುತ ಸಮಾಜದಲ್ಲಿ ಸಾಕಷ್ಟು ಪರ ವಿರೋಧಗಳ ನಡುವೆಯೂ ಕೂಡ ನೇರ ನಿಷ್ಠುರವಾದಿಯಾಗಿ ತಮ್ಮ ಬರವಣಿಗೆಗಳ ಮೂಲಕವೇ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಂತಹ ಭೈರಪ್ಪ ಅವರು ನಮ್ಮ ಹಾಸನ ಜಿಲ್ಲೆಯವರು ಎಂಬುದು ನಮಗೆ ಹೆಮ್ಮೆಯ ವಿಚಾರ ಎಂದರು.

ಭೈರಪ್ಪ ಅವರು ಎಡವು ಅಲ್ಲ, ಬಲವು ಅಲ್ಲ, ನೇರವಾದಿ. ಕ್ರಾಂತಿಕಾರಿ. ಅದೇ ರೀತಿ ಶಿವಣ್ಣ ಅವರು ಅಪ್ಪಟ ಗಾಂಧಿ ವಾದಿ. ಆದರೆ, ಭೈರಪ್ಪನವರು ವಿಚಾರವಾದಿ. ಇಬ್ಬರ ತತ್ವಗಳು ಮತ್ತು ಆದರ್ಶಗಳು ಬೇರೆ ಬೇರೆಯಾಗಿದ್ದರು ಕೂಡ ಅವರ ಸೇವೆ ಸಮಾಜಕ್ಕೆ ಅಪಾರವಾಗಿದೆ ಎಂದು ಬಣ್ಣಿಸಿದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಕಳೆದೆರಡು ದಿನಗಳಿಂದ ಜಿಲ್ಲೆಯಲ್ಲಿ ಸೂತಕದ ದಿನ ಮತ್ತು ಕರಾಳ ದಿನವಾಗಿದೆ. ಜಿಲ್ಲೆಯ ಇಬ್ಬರು ಮಹಾನ್ ವ್ಯಕ್ತಿ ಎಸ್.ಎಲ್.ಭೈರಪ್ಪ ಮತ್ತು ಎಚ್.ಎಂ.ಶಿವಣ್ಣ ಅವರನ್ನು ಕಳೆದುಕೊಂಡಿರುವುದು ತುಂಬಲಾರದ ನಷ್ಟವನ್ನುಂಟಾಗಿದೆ. ಭೈರಪ್ಪ ಅವರು ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. ಅದೇ ರೀತಿ ಶಿವಣ್ಣ ಅವರು ಕೂಡ ಸ್ವಾತಂತ್ರ್ಯ ಹೋರಾಟಗಾರರಾಗಿ ಜಿಲ್ಲೆಯಲ್ಲಿ ಸಾಕಷ್ಟು ಕೆಲಸ ಮಾಡುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಅವರ ಅಗಲಿಕೆಯ ದುಖವನ್ನ ಭರಿಸುವ ಶಕ್ತಿ ಅಪಗವಂತ ಕರುಣಿಸಲಿ ಎಂದು ಪ್ರಾರ್ಥಿಸಿದರು.

ಶಾಸಕ ಎಚ್.ಪಿ.ಸ್ವರೂಪ್ ಮಾತನಾಡಿ, ನಮ್ಮ ಜಿಲ್ಲೆಯ ಇಬ್ಬರು ಮಹಾನ್ ವ್ಯಕ್ತಿಗಳನ್ನ ನಾವು ಕಳೆದುಕೊಂಡಿದ್ದೇವೆ. ಅವರ ಆದರ್ಶ ತತ್ವಗಳನ್ನು ನಾವೆಲ್ಲರೂ ಪಾಲಿಸಬೇಕಾಗಿದೆ. ಶಿವಣ್ಣ ಅವರು ಎಲ್ಲರಿಗೂ ಕೂಡ ಚಿರಪರಿಚಿತರು ಈ ಗಾಂಧಿ ಭವನ ನಿರ್ಮಾಣದ ಪ್ರಮುಖ ರೂವಾರಿಗಳು. ಅದೇ ರೀತಿ ಭೈರಪ್ಪನವರು ತಮ್ಮ ಬರಹದ ಮೂಲಕವೇ ಎಲ್ಲರ ಮನಸ್ಸನ್ನು ಗೆದ್ದಿರುವಂತಹ ಹಿರಿಯ ಸಾಹಿತಿ ಅವರನ್ನ ಸ್ಮರಿಸುವ ಕೆಲಸ ಅತ್ಯಂತ ಶ್ಲಾಘನೀಯ ಎಂದು ಹೇಳಿದರು.

ಮಹಾನಗರ ಪಾಲಿಕೆಯ ಮಹಾಪೌರ ಗಿರೀಶ್ ಚನ್ನವೀರಪ್ಪ ಮಾತನಾಡಿ, ಇಬ್ಬರ ಗಣ್ಯರ ಹೆಸರನ್ನು ನಗರದ ಯಾವುದಾದರೂ ರಸ್ತೆಗೆ ಹೆಸರನ್ನು ಇಡುವ ಮೂಲಕ ಅವರ ಅವರ ತತ್ವ ಆದರ್ಶಗಳ ಜತೆಗೆ ಅವರನ್ನು ನೆನಪಿಸುವ ಕೆಲಸವನ್ನ ಮಾಡೋಣ ಎಂದು ಹೇಳಿದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ಆರ್. ಗುರುದೇವ್ ಮಾತನಾಡಿ, ನಾನು ಎಂಎಲ್ಎ ಆಗಿದ್ದ ಸಂದರ್ಭದಲ್ಲಿ ಎಚ್.ಎಂ.ಶಿವಣ್ಣ ಅವರು ಸಕಲೇಶಪುರದಲ್ಲಿ ಸ್ಕೌಟ್ ಅಂಡ್ ಗೈಡ್ಸ್ ಗೆ ಜಾಗ ನೀಡುವಂತೆ ಮನವಿ ಮಾಡಿದ್ದರು. ಅಂದಿನಿಂದಲೂ ಕೂಡ ಅವರು ಚಿರಪರಿಚಿತರು, ಅದೇ ರೀತಿ ಅವರನ್ನ ಎವಿಕೆ ಕಾಲೇಜಿನಲ್ಲಿ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದವು, ಆಗಿನಿಂದ ಅವರ ನಿಕಟ ಸಂಪರ್ಕ ಬೆಳೆಯಿತು. ಅವರ ಎಲ್ಲ ಪುಸ್ತಕಗಳನ್ನ ಓದಿದ್ದೇನೆ ಅವರು ಅಧ್ಯಯನ ಮಾಡಿಕೊಂಡು ಬರೆಯುತ್ತಿದ್ದರು ಎಂಬುದು ನಿಜಕ್ಕೂ ಸಂತೋಷದ ವಿಚಾರ ಎಂದರು.

ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ಜಿ.ಎಲ್. ಮುದ್ದೇಗೌಡ ಅಧ್ಯಕ್ಷತೆ ವಹಿಸಿದ್ದರು. ಚಿಂತಕ ಆರ್.ಪಿ. ವೆಂಕಟೇಶಮೂರ್ತಿ, ಅಂತಾರಾಷ್ಟ್ರೀಯ ಬುಕರ್ ಪ್ರಶಸ್ತಿ ವಿಜೇತರಾದ ಬಾನುಮುಷ್ತಾಕ್, ಮಾಜಿ ಶಾಸಕ ಬಿ.ವಿ. ಕರಿಗೌಡ, ಜಾನಪದ ತಜ್ಞ ಹಂಪನಳ್ಳಿ ತಿಮ್ಮೇಗೌಡ, ಮಹಾನಗರ ಪಾಲಿಕೆಯ ಉಪಮೇಯರ್ ಹೇಮಲತಾ ಕಮಲ್‌ಕುಮಾರ್, ಸಂಗಮೇಶ್ವರ ಸ್ವಾಮೀಜಿ, ಕೆ.ಟಿ.ಶಿವಪ್ರಸಾದ್, ಐಸಾಮಿಗೌಡ, ವಾರ್ತಾಧಿಕಾರಿ ಮೀನಾಕ್ಷಿ, ಎಚ್.ಪಿ. ಮೋಹನ್, ನಾಯಕರಹಳ್ಳಿ ಮಂಜೇಗೌಡ, ರವಿ ನಾಕಲಗೂಡು, ಚೈತ್ರ ನಾಯಕರಹಳ್ಳಿ ಇತರರು ಇದ್ದರು.

# ಸಾಹಿತ್ಯ ಲೋಕದ ದಿಗ್ಗಜ ಎಸ್.ಎಲ್ ಭೈರಪ್ಪ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಸಕಲೇಶಪುರ : ಸಾಹಿತ್ಯ ಲೋಕದ ದಿಗ್ಗಜ ಎಸ್.ಎಲ್ ಭೈರಪ್ಪ ಎಂದು ಕನ್ನಡ ಸಾಹಿತ್ಯಪರಿಷತ್ ಅಧ್ಯಕ್ಷೆ ಶಾರದ ಗುರುಮೂರ್ತಿ ಹೇಳಿದರು.

ಶುಕ್ರವಾರ ಪಟ್ಟಣದ ಪುರಭವನದ ಎದುರು ಕನ್ನಡಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ ಎಲ್.ಎಲ್ ಭೈರಪ್ಪನವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಕಡುಬಡತನದಲ್ಲಿ ಹುಟ್ಟಿ ಸಾಹಿತ್ಯ ಲೋಕದಲ್ಲಿ ಅಚ್ಚಳಿಯದ ಹೆಸರು ಮಾಡಿದ ಸಾಹಿತಿ ಎಸ್.ಎಲ್ ಭೈರಪ್ಪ ಇವರ ಒಂದೊಂದು ಕಾದಂಬರಿಗಳು ತಲಾಮಾರುಗಳ ಕಾಲ ಜೀವಂತವಾಗಿರಲಿವೆ. ವಿಚಾರಗಳನ್ನು ವೈಜ್ಞಾನಿಕವಾಗಿ,ವಿಶ್ಲೇಷಣಾತ್ಮಕವಾಗಿ ಬರೆದವರು ಭೈರಪ್ಪನವರು.ಇವರ ಕೃತಿಗಳಷ್ಟು ಟೀಕೆ,ಟಿಪ್ಪಣಿಗಳಿಗೆ ಒಳಗಾದ ಸಾಹಿತ್ಯ ಮತ್ತೊಂದಿಲ್ಲ. ಕೇವಲ ಸಾಹಿತಿಯಲ್ಲದೆ ಹುಟ್ಟೂರಿನ ಅಭಿವೃದ್ದಿಗೂ ಸಾಕಷ್ಟು ಕೊಡುಗೆ ನೀಡಿದವರು ಭೈರಪ್ಪ. ಇವರ ಜೀವನ ಶೈಲಿ ಯುವಕರಿಗೆ ಮಾದರಿಯಾಗಿದೆ ಎಂದರು.

ಮಲೆನಾಡು ವೀರಶೈವ ಸಮಾಜದ ಮಾಜಿ ಅಧ್ಯಕ್ಷ ದಿವಾನ್ ಮಾತನಾಡಿ, ಭೈರಪ್ಪನವರ ಕಾದಂಬರಿಗಳನ್ನು ಓದದ ಹೊರತು ಇವರ ಬಗ್ಗೆ ಅರ್ಥಮಾಡಿಕೊಳ್ಳುವುದು ಕಷ್ಟ. ಇವರ ಸಾಕಷ್ಟು ಕಾದಂಬರಿಗಳು ಚಲನಚಿತ್ರಗಳಾಗಿರುವುದು ಇವರ ಕಾದಂಬರಿಗಳಿಗಿದ್ದ ಗಟ್ಟಿತನವನ್ನು ಎತ್ತಿ ತೊರುತ್ತದೆ. ಇಂತಹ ಸಾಹಿತಿ ನಮ್ಮನ್ನೆಲ್ಲ ಅಗಲೀರುವುದು ಸಾಹಿತ್ಯ ಲೋಕಕ್ಕೆ ತುಂಭಲಾರದ ನಷ್ಟವನ್ನು ಉಂಟುಮಾಡಿದೆ ಎಂದರು.

ಕಾರ್ಯಕ್ರಮದಲ್ಲಿ ಭೈರಪ್ಪನವರ ಭಾವಚಿತ್ರ ಪುಷ್ಪನಮನ ಸಲ್ಲಿಸಲಾಯಿತು. ಈ ವೇಳೆ ಕನ್ನಡ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಯೋಗೇಶ್,ಸಮಾಜ ಸೇವಕರಾದ ನಾರಯಣ ಆಳ್ವ, ನಂದಿಕೃಪರಾಜು, ಟಿಂಬರ್ ಸುರೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ದಸರಾ ಕವಿಗೋಷ್ಠಿ: ಪರಮೇಶ್ ಮಡಬಲು ಕವನ ವಾಚನ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವಿಶ್ವವಿಖ್ಯಾತ ಮೈಸೂರು ದಸರಾ ಕವಿಗೋಷ್ಠಿ ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿ ಕುವೆಂಪು ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ನಡೆದ ಪಂಚಕಾವ್ಯದೌತಣ 2 ನೇ ದಿನದ ಪ್ರಚುರ ಕವಿಗೋಷ್ಠಿಯಲ್ಲಿ ಸಾಹಿತಿ ಹಾಗೂ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಎಂ.ಜಿ.ಪರಮೇಶ್ ಮಡಬಲು ಕವಿತೆ ವಾಚನ ಮಾಡಿದರು.ಇವರ 'ಅವ್ವ'ಕವನ ಸಂಕಲನದಲ್ಲಿನ ದೇವರಿದ್ದಾನೆ..! ಕವನವು ಎಲ್ಲರ ಗಮನ ಸೆಳೆಯಿತು.

ವೈಚಾರಿಕ ನೆಲೆಗಟ್ಟಿನಲ್ಲಿರುವ ಈ ಕವನವು, ದೇವರನ್ನು ಪ್ರಕೃತಿಯ ಮಡಿಲಲ್ಲಿ, ಅಕ್ಕರೆ ತುಂಬಿದ ಅಮ್ಮನ ಮೊಗದಲ್ಲಿ,ಮಗುವಿನ ನಿಷ್ಕಲ್ಮಶ ನಗುವಿನಲ್ಲಿ, ಹಸಿದವರುಣ್ಣುವ ಅನ್ನದಲ್ಲಿ, ಹರಿವ ನೀರ ನಿನಾದದಲ್ಲಿ, ಜಗದ ಕತ್ತಲೆ ಕಳೆಯುವ ನೇಸರನಲ್ಲಿ, ಅರಿವಿನ ಹಣತೆ ಹಚ್ಚಿ ಸನ್ಮಾರ್ಗದ ದಾರಿತೋರುವ ಗುರುವಿನಲ್ಲಿ ದೇವರನ್ನು ಕಾಣಬೇಕು.ಸತ್ಯ ಧರ್ಮ ನ್ಯಾಯ ನೀತಿಯಲ್ಲಿ ಮುನ್ನಡೆಯಬೇಕು.

ದೇವರನ್ನು ಎಲ್ಲೂ ಹುಡಕದೆ ನಾವು ಮಾಡುವ ಸತ್ಕಾರ್ಯದಲ್ಲಿಯೇ ಕಾಣಬೇಕು ಎನ್ನುವ ವೈಚಾರಿಕತೆಯ ಸಂದೇಶವಿದೆ.ಮೌಲಿಕವಾದ ಅಭಿವ್ಯಕ್ತಿಯಿದೆ.ನಮ್ಮ ಆಲೋಚನೆಗಳಲ್ಲಿ,ದೂರದೃಷ್ಟಿತ್ವದಲ್ಲಿ ಧನಾತ್ಮಕ ಚಿಂತನೆಗಳಿರಬೇಕು ಎನ್ನುವ ಸದಾಶಯವಿರುವ ಪ್ರಸ್ತುತ ಕವಿತೆಯು ಕವಿಗೋಷ್ಠಿಯಲ್ಲಿ ನೆರೆದಿದ್ದ ಸಾಹಿತ್ಯಾಸಕ್ತರ ಗಮನ ಸೆಳೆಯಿತು.ಇದೇ ಸಂದರ್ಭದಲ್ಲಿ ವಿವಿಧ ಜಿಲ್ಲೆಗಳ 43 ಕ್ಕೂ ಹೆಚ್ಚು ಕವಿಗಳು,ಕವಯಿತ್ರಿಯರು ಕವನ ವಾಚಿಸಿ ಕವಿಗೋಷ್ಠಿಗೆ ವಿಶಿಷ್ಟ ಮೆರುಗು ತಂದರು.ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ, ಶಿವಾನಂದ ತಗಡೂರು 2ನೇ ದಿನದ ಪ್ರಚುರ ಕವಿಗೋಷ್ಠಿ ಉದ್ಘಾಟಿಸಿ ಮಾತನಾಡಿದರು. ಖ್ಯಾತ ಕವಯಿತ್ರಿ ಡಾ.ಸುಕನ್ಯ ಮಾರುತಿ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದ್ದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಖ್ಯಾತಕವಿ,ರಾಜೇಂದ್ರ ಪ್ರಸಾದ್, ಸೋಮಶೇಖರ್, ಸುರೇಶ್, ಡಾ.ಮಹೇಶ್ ದಳಪತಿ, ಮರಿದೇವಯ್ಯ,ಚೇತನ್ ಬಾಬು,ರಾಘವೇಂದ್ರ ಉಪಸ್ಥಿತರಿದ್ದರು.

# ನಿರ್ದೇಶಕರ ಸ್ಥಾನಗಳಿಗೆ ವರ್ಷದ ಕೊನೆಯಲ್ಲಿ ಚುನಾವಣೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಚನ್ನರಾಯಪಟ್ಟಣ: ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ನೂತನ ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ವರ್ಷದ ಕೊನೆಯಲ್ಲಿ ಚುನಾವಣೆ ನಿಗದಿಯಾಗಿದ್ದು, ಚುನಾವಣೆಯಲ್ಲಿ ಕಾರ್ಖಾನೆಯ ಎಲ್ಲ 30005 ಮಂದಿ ಷೇರುದಾರರಿಗೂ ಮತನದಾನ ಅವಕಾಶ ಕಲ್ಪಿಸಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಶ್ರೀನಿವಾಸಪುರದಲ್ಲಿನ ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ 2024-25ನೇ ಸಾಲಿಗೆ ನಡೆಸಲಾದ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರ ಪ್ರಶ್ನೆಗಳಿಗೆ, ಮತ್ತು ಬೇಡಿಕೆಗಳಿಗೆ ಉತ್ತರಿಸಿದ ಅವರು, ಉಚ್ಚ ನ್ಯಾಯಾಲಯದ ಸೂಚನೆಯಂತೆ ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ ಆಡಳಿತ ಮಂಡಳಿಗೆ ಚುನಾವಣೆ ನಿಗದಿಯಾಗಿದ್ದು, ಪ್ರಸಕ್ತ ವರ್ಷದ ನವೆಂಬರ್, ಇಲ್ಲವೇ ಡಿಸೆಂಬರ್‌ನಲ್ಲಿ ಚುನಾವಣೆ ನಿಗದಿಯಾಗಲಿದೆ. ಐದು ವಾರ್ಷಿಕ ಸಭೆಯ ಪೈಕಿ ಕನಿಷ್ಠ ಎರಡು ಸಭೆಗಳಿಗೆ ಹಾಜರಾದ ಷೇರುದಾರ ಸದಸ್ಯರಿಗಷ್ಟೆ ಮತದಾನದ ಹಕ್ಕು ನೀಡಬೇಕು ಎಂಬ ನಿಯಮವಿದ್ದರೂ, ಸರ್ಕಾರದ ಮಟ್ಟದಲ್ಲಿ ಸಹಕಾರ ಇಲಾಖೆಯೊಂದಿಗೆ ಚರ್ಚಿಸಿ ಕಾರ್ಖಾನೆಯಲ್ಲಿರುವ ಎಲ್ಲ 30005 ಮಂದಿ ಷೇರುದಾರರಿಗೂ ಮತದಾನದ ಅವಕಾಶ ಕಲ್ಪಿಸಲಾಗಿದೆ ಎಂದರು.

ಸದಸ್ಯರಿಗೆಲ್ಲರಿಗೂ ಗುರುತಿನ ಕಾರ್ಡ್ ನೀಡಬೇಕಾಗಿರುವ ಹಿನ್ನಲೆಯಲ್ಲಿ ತಾಲ್ಲೂಕಿನ ಪ್ರತಿ ಹೋಬಳಿಗೊಂದರಂತೆ ಕೇಂದ್ರ ತೆರೆಯಲಾಗುವುದು, ಮತ್ತು ಹೊರ ಜಿಲ್ಲೆ, ತಾಲ್ಲೂಕಿನ ಸದಸ್ಯರಿಗೆ ತಾಲ್ಲೂಕಿಗೊಂದರಂತೆ ಕೇಂದ್ರ ತೆರೆದು ಗುರುತಿನ ಕಾರ್ಡ್ ತಲುಪಿಸುವ ವ್ಯವಸ್ಥೆ ಮಾಡಲಾಗುವುದು ಎಂದರು. ವಿದ್ಯುತ್ ಇಲಾಖೆಯೂ ಸಬ್ ಸ್ಟೇಷನ್ ನಿರ್ಮಾಣ ಮಾಡಲು ಎರಡು ಎಕರೆ ಜಾಗ ಕೇಳಿದ್ದು, ಕಾರ್ಖಾನೆಯ ಆವರಣದಲ್ಲಿ ಎರಡು ಎಕರೆ ಇದಕ್ಕಾಗಿ ಮೀಸಲಿಡಲು ಇಂದಿನ ಸಭೆಯಲ್ಲಿ ಒಪ್ಪಿಗೆ ನೀಡಿರುವುದರಿಂದ ಈ ಭಾಗದಲ್ಲಿ ಮುಂದಿನ ದಿನಗಳಲ್ಲಿ ರೈತರಿಗೆ ಗುಣಮಟ್ಟದ ವಿದ್ಯುತ್ ಸರಬರಾಜಿಗೆ ಅನುಕೂಲವಾಗಲಿದೆ ಎಂದರು.

ಷೇರುದಾರ ವಿ.ಎನ್.ರಾಜಣ್ಣ, ಕಳೆದ ಸಭೆಯಲ್ಲಿಯೂ ಮರಣ ನಿಧಿ ಸ್ಥಾಪನೆ ಮಾಡುವಂತೆ ಒತ್ತಾಯ ಕೇಳಿಬಂದ ಹಿನ್ನಲೆಯಲ್ಲಿ, ಮರಣನಿಧಿಗಾಗಿ 2ಕೋಟಿ ಹಣ ಇಟ್ಟಿರುವುದು ಸ್ವಾಗತಾರ್ಹವಾದರೂ ಇದುವರೆವಿಗೂ ಆದರ ಉಪಯೋಗವಾಗಿಲ್ಲ, ಯಾವ ರೈತರು ಸಾವನ್ನಪಿಲ್ಲವೇ ಎಂದು ಪ್ರಶ್ನಿಸಿ ಕಳೆದ ಬಾರಿ ಸಕ್ಕರೆ ನೀಡುವುದಾಗಿ ಹೇಳಿ ನೀಡಿಲ್ಲ, ಈ ಬಾರಿ ಪ್ರತಿ ಸದಸ್ಯನಿಗೆ 50 ಕೆಜಿ ಸಕ್ಕರೆ ನೀಡಬೇಕೆಂದು ಆಗ್ರಹಿಸಿದರು.

ಮಂತ್ರೊರ್ವ ಸದಸ್ಯ ಟಿಎಪಿಸಿಎಂಎಸ್ ಅಧ್ಯಕ್ಷ ಅನಿಲ್ ಕುಮಾರ್ ಮಾತನಾಡಿ, 2024-25ನೇ ಸಾಲಿನಲ್ಲಿ ಕಾರ್ಖಾನೆಗೆ ಎಷ್ಟು ಕಬ್ಬು ಸರಬರಾಜು ಆಗಿದೆ, ಎಷ್ಟು ರೈತರು ಕಬ್ಬು ಬೆಳೆದಿದ್ದಾರೆ ಎಂಬ ಮಾಹಿತಿ ಕೇಳಿದಾಗ, ಆಡಳಿತ ಮಂಡಳಿಯೂ ಉತ್ತರಿಸಲು ತಡಬಡಾಯಿಸಿದ ಘಟನೆ ನಡೆಯಿತ್ತು, ಮುಂದುವರಿದು ಅವರು, ಕಾರ್ಖಾನೆಯ ವಾರ್ಷಿಕ ಸಭೆಯಲ್ಲಿ ಅತಿಹೆಚ್ಚು ಕಬ್ಬು ಸರಬರಾಜು ಮಾಡುವ ರೈತ, ಮತ್ತು ಎಕರೆಗೆ ಅತಿಹೆಚ್ಚು ಇಳುವರಿ ಕಬ್ಬು ಬೆಳೆದ ರೈತರನ್ನು ಸನ್ಮಾನಿಸುವಂತೆ ಆಗ್ರಹಿಸಿದರು, ಇದರಿಂದ ರೈತರನ್ನು ಪ್ರೋತ್ಸಾಹಿಸಿದಂತಾಗುತ್ತದೆ ಎಂದರು.

ಸದಸ್ಯ ಕುಂಬಾರಹಳ್ಳಿ ರಮೇಶ್ ಮಾತನಾಡಿ, ಕಾರ್ಖಾನೆಯು ಹೌಸಿಂಗ್ ಬೋರ್ಡ್ ಬಡಾವಣೆ ಬಳಿ ಹೊಂದಿರುವ 17.10 ಎಕರೆ ಜಾಗದಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿಯವರ ನೆರವಿನಿಂದ ಗಾರ್ಮೆಂಟ್ಸ್ ಕಾರ್ಖಾನೆಯನ್ನು ತೆರಯುವಲ್ಲಿ ಆಡಳಿತ ಮಂಡಳಿ ಕ್ರಮವಹಿಸಬೇಕು, ಇಲ್ಲವೇ ಆ ಜಾಗವನ್ನು ಕಾರ್ಖಾನೆ ಆರಂಭಿಸುವವರಿಗೆ ಬಾಡಿಗೆ ನೀಡಬೇಕು, ಇದರಿಂದ ತಾಲ್ಲೂಕಿನ ಸಾವಿರಾರು ಮಂದಿಗೆ ಆರ್ಥಿಕ ಶಕ್ತಿ ಸಿಗಲಿದೆ ಎಂದರು.

ಇದಕ್ಕುತ್ತರಿಸಿದ ಶಾಸಕ ಬಾಲಕೃಷ್ಣರವರು, ಚುನಾವಣೆ ಸಮಯವಾಗಿರುವುದರಿಂದ ಸಕ್ಕರೆ ನೀಡಲಾಗದು, ಚುನಾವಣೆ ನಂತರ ಹೊಸ ಆಡಳಿತ ಮಂಡಳಿ ರಚನೆಯಾದ 60 ದಿನದೊಳಗೆ 30ಕೆಜಿ ಸಕ್ಕರೆ ನೀಡಲಾಗುವುದು, ಮುಂದಿನ ಸಭೆಯಲ್ಲಿ ಪ್ರತಿ ತಾಲ್ಲೂಕಿಗೊಬ್ಬ ರೈತರಂತೆ 5 ಮಂದಿ ಕಬ್ಬು ಬೆಳೆಗಾರರನ್ನು ಸನ್ಮಾನಿಸಲಾಗುವುದು, ಮತ್ತು ಕಾರ್ಖಾನೆಯ 17 ಎಕರೆ ಜಾಗದಲ್ಲಿ ಗಾರ್ಮೆಂಟ್ಸ್ ಕಾರ್ಖಾನೆ ತೆರೆಯಲು ಕ್ರಮವಹಿಸುವುದರ ಜೊತೆಗೆ ರಸ್ತೆಯಂಚಿನ ಜಾಗದಲ್ಲಿ ಷೇರುದಾರರಿಗೆ ಕಡಿಮೆ ಬಾಡಿಗೆಯಲ್ಲಿ ನೀಡುವ ಹೈಟೆಕ್ ಕಲ್ಯಾಣಮಂಟಪವನ್ನು ನಿರ್ಮಾಣ ಮಾಡಲಾಗುವುದೆಂದರು.

ಸಭೆಯ ಆರಂಭದಲ್ಲಿ 2024-25ನೇ ಸಾಲಿನ ಆಡಿಟ್ ವರದಿ, ಮಂಡಿಸುವ ವೇಳೆ ಕಾಂಗ್ರೆಸ್ ಪಕ್ಷದ ಮುಖಂಡರು, ಷೇರುದಾರರು ಖರ್ಚಿನ ಕುರಿತಾಗಿ ಆಕ್ಷೇಪ ವ್ಯಕ್ತಪಡಿಸಿದರು. ಎಲ್ಲ ಷೆರುದಾರರಿಗೆ ಆಹ್ವಾನ ಪತ್ರಿಕೆ ತಲುಪಿಸಲಾಗಿಲ್ಲ ಎಂದು ಆರೋಪಿಸಿದರು, ಮತ್ತು ಕಾರ್ಖಾನೆಯನ್ನು ಲೀಜ್ ಪಡೆದವರು ಕೋವಿಡ್ ಹಿನ್ನಲೆಯಲ್ಲಿ 21ವರ್ಷ ಮತ್ತು ಮೇಲ್ದರ್ಜೆಗೇರಿಸುವ ಸಮಯದಲ್ಲಿ 2ವರ್ಷ ರನ್ ಮಾಡಲಾಗದ ಕಾರಣ ಗುತ್ತೀಗೆಯನ್ನು 4ವರ್ಷಗಳು ವಿಸ್ತರಣೇ ಮಾಡುವಂತೆ ಮನವಿ ಕೋರಿರುವ ವಿಷಯ ಸಭೆಯಲ್ಲಿ ಮಂಡನೆಯಾದಾಗ ಕಾಂಗ್ರೆಸ್ ಪಕ್ಷದ ಸದಸ್ಯರು ವಿರೋಧ ವ್ಯಕ್ತಪಡಿಸಿದರು, ಅಣತಿ ಆನಂದ್ ಮಾತನಾಡಿ, ಲೀಸ್ ಅವಧಿ ವಿಸ್ತರಣೆ ಎಂದಿಗೂ ಮಾಡಕೂಡದು, ಅಲ್ಲದೇ ಇನ್ನೂ 12ವರ್ಷ ಲೀಸ್ ಅವಧಿ ಇದೆ, ಈ ವಿಷಯ ಈಗ್ಯಾಕೆ ಎಂದು ಪ್ರಶ್ನಿಸಿದರು.

ಅಧ್ಯಕ್ಷ ಸಿ,ಎನ್.ವೆಂಕಟೇಶ್ ಮಾತನಾಡಿ, ಸದಸ್ಯರು ಆಗಬೇಕಾಗಿರುವ ಕೆಲಸಗಳ ಕುರಿತಾಗಿ ಲಿಖಿತವಾಗಿ ಅರ್ಜಿಗಳನ್ನು ನೀಡಿದ್ದು, ಅವುಗಳನ್ನು ಮುಂಡೇಶ್ವರಿ ಶುರ?ಸ್ನವರ ಗಮನಕ್ಕೆ ತಂದು ಬಗೆಹರಿಸುವುದಾಗಿ ತಿಳಿಸಿದರು.

# ಸಿವಿಸ್‌ಸಿ ಕೇಂದ್ರದ ಉದ್ಘಾಟನಾ ಸಮಾರಂಭ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಅರಕಲಗೂಡು: ವೀರಶೈವ ಲಿಂಗಾಯಿತ ಜನೋಪಯೋಗಿ ಸೌಹಾರ್ದ ಸಹಕಾರಿ ಸಂಘವು ಗ್ರಾಹಕರಿಗೆ ಉತ್ತಮ ಸೇವೆ ನೀಡುವ ಮುಖೇನ ಲಾಭಾಂಶದತ್ತ ಮುನ್ನಡೆ ಸಾಧಿಸಿರುವುದು ಶ್ಲಾಘನೀಯ ಸಂಗತಿ ಎಂದು ದೊಡ್ಡಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಮಲ್ಲಿಪಟ್ಟಣ ರಸ್ತೆಯಲ್ಲಿ ಹೊಸದಾಗಿ ಸ್ಥಾಪಿಸಿರುವ ಸಂಘದ ಕಚೇರಿ ಹಾಗೂ ಸಿವಿಸ್‌ಸಿ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಶುಕ್ರವಾರ ಸಾನಿಧ್ಯ ವಹಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ನಾನು ನೋಡಿದಂತೆ ಈ ಸಂಘ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿದ್ದು ಹಣಕಾಸಿನ ಅವಶ್ಯಕತೆ ಇರುವ ಎಲ್ಲ ಸಮಾಜದ ಗ್ರಾಹಕರಿಗೆ ಸಾಲ ಸೌಲಭ್ಯ ಒದಗಿಸುತ್ತಿದೆ. ಸಮಾಜಕ್ಕೆ ಇಂತಹ ಸಂಘಗಳ ಸೇವೆ ಅತ್ಯವಶ್ಯಕವಾಗಿದೆ ಎಂದರು.

ಸಂಘದ ನೂತನ ಕಚೇರಿ ಉದ್ಘಾಟಿಸಿದ ಶಾಸಕ ಎ. ಮಂಜು ಮಾತನಾಡಿ, ಈ ಸಂಘವು ಗ್ರಾಹಕರ ಅನುಕೂಲಕ್ಕಾಗಿ ಶ್ರಮಿಸುತ್ತಿದ್ದು ಮುಂದಿನ ದಿನಗಳಲ್ಲಿಯೂ ಉನ್ನತ ಸೇವೆ ನೀಡುವಂತಾಗಲಿ, ಸಂಘದ ಆಶಯಗಳಿಗೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಸಂಘದ ಅಧ್ಯಕ್ಷ ಎನ್. ರವಿಕುಮಾರ್ ಮಾತನಾಡಿ, ವೀರಶೈವ ಲಿಂಗಾಯಿತ ಜನೋಪಯೋಗಿ ಸೌಹಾರ್ದ ಸಹಕಾರಿ ಸಂಘವು ಗ್ರಾಹಕರಿಗೆ ವಿವಿಧ ಉದ್ದೇಶಗಳಿಗಾಗಿ ಸಂಘವು 3 ಕೋಟಿ ರೂ ಸಾಲ ನೀಡಿದೆ. ಮುಂದಿನ ದಿನಗಳಲ್ಲಿಯೂ ಗ್ರಾಹಕರ ಸೇವೆಗೆ ಸಂಘ ಸದಾ ಬದ್ಧವಾಗಿದೆ ಎಂದರು.

ಕೆಸವತ್ತೂರು ಮಠದ ಶ್ರೀ ಬಸವರಾಜೇಂದ್ರ ಸ್ವಾಮೀಜಿ, ಚಿಲುಮೆ ಮಠದ ಶ್ರೀ ಜಯದೇವ ಸ್ವಾಮೀಜಿ, ಶಿರದನಹಳ್ಳಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ಸಂಘದ ಉಪಾಧ್ಯಕ್ಷ ಲಿಂಗರಾಜಯ್ಯ, ನಿರ್ದೇಶಕರಾದ ಯೋಗೇಶ್, ರುದ್ರಪ್ಪ, ಬಿ.ಪಿ. ವೀರೇಶ್, ವಾಗೀಶ್, ಧರ್ಮ, ಮಹಾದೇವು, ವಿರೂಪಾಕ್ಷ, ಸುಂದರೇಶ್, ಹೇಮಲತಾ, ಸುನಿತಾ ಲೋಕೇಶ್, ಪಪಂ ಮಾಜಿ ಅಧ್ಯಕ್ಷ ಮಂಜು ಶೆಟ್ಟಿಗೌಡ, ಬೆಮ್ಮತ್ತಿ ಸುರೇಶ್, ಕಾಫಿ ಬೆಳೆಗಾರ ಗೇಟ್ ವೆಂಕಟೇಶ್ ಇತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್-27

1066 ವಿಲಿಯಂ ದಿ ಕಾಂಕರರ್ ನ ಪಡೆಗಳು ಇಂಗ್ಲೆಂಡ್ ವಶಪಡಿಸಿಕೊಳ್ಳಲು ನಾರ್ಮಂಡಿಯಿಂದ ಪ್ರಯಾಣ ಬೆಳೆಸಿದವು.

1290 ರಲ್ಲಿ ಚೀನಾ ಬಳಿಯ ಚಿಹ್ಲಿ ಕೊಲ್ಲಿಯಲ್ಲಿ (ಬೋಹೈ ಸಮುದ್ರ) ಸಂಭವಿಸಿದ ಭೂಕಂಪವು 100,000 ಜನರನ್ನು ಬಲಿ ತೆಗೆದುಕೊಂಡಿತು ಎಂದು ವರದಿಯಾಗಿದೆ.

1779: ಗ್ರೇಟ್ ಬ್ರಿಟನ್ ಜೊತೆ ಕ್ರಾಂತಿಕಾರಿ ಯುದ್ಧ ಶಾಂತಿ ಒಪ್ಪಂದಗಳನ್ನು ಮಾಡಿಕೊಳ್ಳಲು ಜಾನ್ ಆಡಮ್ಸ್ ನೇಮಕಗೊಂಡರು.

1821 ರಲ್ಲಿ, ಸ್ಪ್ಯಾನಿಷ್ ಪಡೆಗಳು ಹಿಂದೆ ಸರಿಯುತ್ತಿದ್ದಂತೆ, ಅಗಸ್ಟಿನ್ ಡಿ ಇಟುರ್ಬೈಡ್ ನೇತೃತ್ವದ ಮೆಕ್ಸಿಕನ್ ಕ್ರಾಂತಿಕಾರಿ ಪಡೆಗಳು ಮೆಕ್ಸಿಕೊ ನಗರವನ್ನು ಆಕ್ರಮಿಸಿಕೊಂಡವು, ಇದು ಮೆಕ್ಸಿಕನ್ ಸ್ವಾತಂತ್ರ್ಯ ಸಂಗ್ರಾಮವನ್ನು ಕೊನೆಗೊಳಿಸಿತು.

1822 ರಲ್ಲಿ, ಫ್ರೆಂಚ್ ವಿದ್ವಾಂಸ ಜೀನ್-ಫ್ರಾಂಕೋಯಿಸ್ ಚಾಂಪೋಲಿಯನ್ ಅವರು ರೊಸೆಟ್ಟಾ ಸ್ಟೋನ್ ಬಳಸಿ ಈಜಿಪ್ಟಿನ ಚಿತ್ರಲಿಪಿಗಳನ್ನು ಅರ್ಥೈಸಿಕೊಂಡಿದ್ದಾರೆ ಎಂದು ಘೋಷಿಸಿದರು.

1905 ರ ಭೌತಶಾಸ್ತ್ರ ಜರ್ನಲ್ ಅನ್ನಾಲೆನ್ ಡೆರ್ ಫಿಸಿಕ್ ಆಲ್ಬರ್ಟ್ ಐನ್‌ಸ್ಟೈನ್ ರ ದೇಹದ ಜಡತ್ವವು ಅದರ ಶಕ್ತಿಯ ವಿಷಯವನ್ನು ಅವಲಂಬಿಸಿರುತ್ತದೆಯೇ? ಎಂಬ ಪ್ರಬಂಧವನ್ನು ಪ್ರಕಟಿಸಿತು, ಇದು $E=mc^2$ ಸಮೀಕರಣವನ್ನು ಪರಿಚಯಿಸಿತು.

# ಗೊಮ್ಮಟನಗರದಲ್ಲಿ ಗಿಡ ನೆಡುವ ಕಾರ್ಯಕ್ರಮ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಶ್ರವಣಬೆಳಗೊಳ: ಬಿಜೆಪಿ ಸೇವಾ ಪಾಕ್ಷಿಕ ಕಾರ್ಯಕ್ರಮವು ದೇಶಾದ್ಯಂತ ಹಲವಾರು ಜನಪರ ಕಾರ್ಯಗಳನ್ನು ಆಯೋಜಿಸಿ, ಸಾರ್ವಜನಿಕ ಸೇವೆಗೆ ಒತ್ತು ನೀಡುವ ಮೂಲಕ ಸಾಮಾಜಿಕ ಬದಲಾವಣೆಗೆ ಪ್ರೋತ್ಸಾಹ ನೀಡುತ್ತಿದೆ ಎಂದು ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಹೇಳಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಹುಟ್ಟುಹಬ್ಬದ ಪ್ರಯುಕ್ತ ಬಿಜೆಪಿ ಶ್ರವಣಬೆಳಗೊಳ ಮಂಡಲದ ವತಿಯಿಂದ ಸೇವಾ ಪಾಕ್ಷಿಕ ಕಾರ್ಯಕ್ರಮದ ಅಂಗವಾಗಿ ಶುಕ್ರವಾರ ಗೊಮ್ಮಟನಗರದಲ್ಲಿ ಗಿಡ ನೆಡುವ ಕಾರ್ಯಕ್ರಮ ನೆರವೇರಿಸಿ ಮಾತನಾಡಿದರು.

ಪಕ್ಷದ ಸದಸ್ಯರು ಮತ್ತು ಕಾರ್ಯಕರ್ತರು ಜನಸೇವೆ, ಸ್ವಚ್ಛತಾ ಅಭಿಯಾನಗಳು, ರಕ್ತದಾನ ಶಿಬಿರಗಳು, ಗಿಡ ನೆಡುವ ಕಾರ್ಯಗಳು, ಆರೋಗ್ಯ ಶಿಬಿರ, ಸ್ವದೇಶಿ ಉತ್ಪನ್ನಗಳ ಪ್ರೋತ್ಸಾಹ ಸೇರಿದಂತೆ ಪರಿಸರ ಸಂರಕ್ಷಣೆ ಮತ್ತು ಗ್ರಾಮೀಣ ಭಾಗಗಳಲ್ಲಿ ಸ್ವಚ್ಛತಾ ಅಭಿಯಾನಗಳನ್ನು ಆಯೋಜಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು. ಆರೋಗ್ಯ ಮತ್ತು ಸ್ವಚ್ಛತೆ ಕುರಿತು ಜಾಗೃತಿ ಮೂಡಿಸುವ ಕೆಲಸವಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗಿರೀಶ್ ನಂಬಿಹಳ್ಳಿ, ತಾಲೂಕು ಅಧ್ಯಕ್ಷ ಗಂಗಾಧರ್ ಪರಮ, ಪ್ರಧಾನ ಕಾರ್ಯದರ್ಶಿ ನಾಗೇಶ್ ಹಿರಿಬಿಳ್ತಿ, ತಾಲ್ಲೂಕು ಯುವಮೋರ್ಚ ಪ್ರಧಾನ ಕಾರ್ಯದರ್ಶಿ ಪ್ರಶಾಂತ್, ಕಾರ್ಯದರ್ಶಿ ಶ್ರವಣ್, ಹೋಬಳಿ ಅಧ್ಯಕ್ಷ ಮನುಗೌಡ, ಮುಖಂಡರಾದ ಲಿಖಿತ್ ಹಾಸನ್, ಎಸ್.ಜೆ.ಭಾಸ್ಕರಾಚಾರ್, ರೂಪೇಶ್,? ಮಂಜಣ್ಣ, ಧರ್ಮರಾಜ್ ಪರಮ, ಅಭಿಲಾಷ್ ಇತರರಿದ್ದರು.

# ಅಬ್ಬನ ಗ್ರಾಪಂ ಅಧ್ಯಕ್ಷೆಯಾಗಿ ಮುಕ್ತಾಂಬಿಕ ಅವಿರೋಧ ಆಯ್ಕೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ತಾಲ್ಲೂಕಿನ ಕೆ. ಹೊಸಕೋಟೆ ಹೋಬಳಿ ಅಬ್ಬನ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿ ಮುಕ್ತಾಂಬಿಕ ಅವಿರೋಧ ಆಯ್ಕೆಯಾದರು.

ಎಂಟು ಸದಸ್ಯ ಬಲದ ಅಬ್ಬನ ಗ್ರಾಮ ಪಂಚಾಯತಿಗೆ ಹಿಂದಿನ ಅಧ್ಯಕ್ಷ ರವಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಉಡುವನಹಳ್ಳಿ ವಾರ್ಡ್ ಸದಸ್ಯೆ ಮುಕ್ತಾಂಬಿಕ ಒಬ್ಬರೇ ನಾಮಪತ್ರ ಸಲ್ಲಿಸಿದ್ದರು. ಶುಕ್ರವಾರ ಮಧ್ಯಾಹ್ನ 2 ಗಂಟೆಯಿಂದ 4 ಗಂಟೆ ವರೆಗೂ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಲು ಕಾಲಾವಕಾಶ ನೀಡಿದ ಚುನಾವಣೆ ಅಧಿಕಾರಿಗಳು ಮುಕ್ತಾಂಬಿಕ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾ ಅಧಿಕಾರಿಯಾಗಿದ್ದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸುಬ್ರಮಣ್ಯ ಶರ್ಮ ಆಯ್ಕೆ ಘೋಷಿಸಿದರು. ಮುಕ್ತಾಂಬಿಕ ಅವರು ಮಾತನಾಡಿ, ತಮ್ಮ ಅಧಿಕಾರ ಅವಧಿಯಲ್ಲಿ ಪ್ರಥಮವಾಗಿ ಮೂಲಭೂತ ಸಮಸ್ಯೆಗಳಿಗೆ ವಿಶೇಷ ಗಮನಹರಿಸಲಾಗುವುದು ಎಂದರು.

ಶಾಸಕ ಸಿಮೆಂಟ್ ಮಂಜು ಅವರ ಮಾರ್ಗದರ್ಶನದಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗುವುದು. ಅಧ್ಯಕ್ಷೆಯಾಗಿ ಆಯ್ಕೆಯಾಗಲು ಸಹಕರಿಸಿದ ಸಹ ಸದಸ್ಯರಿಗೂ, ಪಕ್ಷದ ಮುಖಂಡರಿಗೂ, ಹಿತೈಷಿಗಳಿಗೂ ಧನ್ಯವಾದ ತಿಳಿಸಿದರು.

ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಾಚರಿಸಿದರು.

ಗ್ರಾಪಂ ಸದಸ್ಯರಾದ ಕೃಷ್ಣಮೂರ್ತಿ, ರವೀಂದ್ರ, ಸುಜಾತ, ಅಣ್ಣಪ್ಪ ಪೂಜಾರಿ, ಬಷೀರ್, ರತ್ನಮ್ಮ ಪೂರ್ಣಿಮಾ, ತಾಲ್ಲೂಕು ಬಿಜೆಪಿ ಕಾರ್ಯದರ್ಶಿ ಕೃಷ್ಣಮೂರ್ತಿ, ಪಕ್ಷದ ಮುಖಂಡರಾದ, ಬೈರಾಪುರ ಗಣೇಶ್, ಕಿರಣ್, ಶಿವಕುಮಾರ್, ಸಂಪತ್, ಜಯಪ್ರಕಾಶ್, ಸಂತೋಷ್, ಚೇತನ್ ಇತರರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248